## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಯಡಿ ವಿದ್ಯಾರ್ಥಿವೇತನವನ್ನು ಪಡೆಯಲು ಅಂಕಗಳನ್ನು ನಿಗಧಿಪಡಿಸುವ ಕುರಿತು ಹಾಗೂ ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು ಯೋಜನೆಯನ್ನು ಮಾರ್ಪಡಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: SWL;123;PHP;78, ದಿ: 2-6-1978.
2. ಸರ್ಕಾರದ ಆದೇಶಸಂಖ್ಯೆ: WCD:404:PHP:2001. ದಿ: 4-9-2001.
3. ನಿರ್ದೇಶಕರ ಪತ್ರ ಸಂಖ್ಯೆ: ನಿಅಕಇ:ವಿ.ವೇ. ಮಾಹಿತಿ: 06-07:5177, ದಿನಾಂಕ: 05-08-2006.
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 22-05-2007 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

### ಪ್ರಸ್ತಾವನೆ:

ರಾಜ್ಯ ಸರ್ಕಾರವು ಅಂಗವಿಕಲರಿಗಾಗಿ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುತ್ತಿದೆ. ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದಲ್ಲಿ ಸದರಿ ಯೋಜನೆಯಡಿ 1 ರಿಂದ 8ನೇ ತರತಿಯ ಅಂಗವಿಕಲ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯಲು ಯಾವುದೇ ಅಂಕಗಳನ್ನು ನಿಗಧಿಪಡಿಸಿರುವುದಿಲ್ಲ ಹಾಗೂ ಭಾರತ ಸರ್ಕಾರದ ಹಿಂದಿನ ವಿದ್ಯಾರ್ಥಿ ವೇತನ ಮಂಜೂರಾತಿ ಯೋಜನೆ ಪ್ರಕಾರ ಈಗ ಹಾಲಿ ರಾಜ್ಯ ಸರ್ಕಾರ ಜಾರಿಗೊಳಿಸುತ್ತಿದೆ. ಅಂಗವಿಕಲ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯಲು 9ನೇ ತರಗತಿಯಿಂದ ಶೇ. 40 ರಷ್ಟು ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುತ್ತದೆ. ಮೇಲೆ ಕ್ರಮಸಂಖ್ಯೆ 2 ರಲ್ಲಿ ಓದಲಾದ ಮಾರ್ಪಾಡಿತ ಆದೇಶದ ರೀತ್ಯಾ ಈ ಯೋಜನೆಯಡಿ 1ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಓದುತ್ತಿರುವ ಅಂಗವಿಕಲರು ರೂ. 59/- ರಿಂದ ರೂ. 300/- ವರೆಗೆ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (3) ರಲ್ಲಿ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಅಂಗವಿಕಲ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು 1 ರಿಂದ 8ನೇ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದಿನ ತರಗತಿಗಳಲ್ಲಿ ಹೋಗಬೇಕಾಗುತ್ತದೆ, 8 ರಿಂದ ಮುಂದಿನ ತರಗತಿಗಳಲ್ಲಿ ವಿದ್ಯಾರ್ಥಿವೇತನ ಪಡೆಯಲು ಶೇ. 40 ರಷ್ಟು ಅಂಕಗಳನ್ನು ಪಡೆದಿರಬೇಕಾಗಿರುತ್ತದೆ. ಈ ಯೋಜನೆಯಡಿ ಬುದ್ಧಿಮಾಂಧ್ಯ ಮಕ್ಕಳು ವಿದ್ಯಾರ್ಥಿವೇತನ ಪಡೆಯಲು ಅವಕಾಶವಿರುವುದಿಲ್ಲ, 1ನೇ ತರತಿಯಿಂದ 7ನೇ ತರಗತಿಯವರೆಗೆ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮುಂದಿನ ತರಗತಿಗೆ ಹೋದಲ್ಲಿ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಬಹುದೆಂಬ ಷರತ್ತನ್ನು ವಿಧಿಸಬಹುದು, 8ನೇ ತರಗತಿಯಿಂದ ಮುಂದಿನ ತರಗತಿಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯಲು ಶೇ. 40 ರಷ್ಟು ಅಂಕಗಳನ್ನು ಪಡೆಯಬೇಕು ಎಂಬ ಷರತ್ತನ್ನು ವಿಧಿಸಬೇಕೆಂದು ಕೋರಿರುತ್ತಾರೆ, ಅಲ್ಲದೆ ಈಗ ಶಿಕ್ಷಣ ಇಲಾಖೆಯಲ್ಲಿ ಪರೀಕ್ಷಾ ಪದ್ಧತಿಯಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿರುವುದರಿಂದ ಅಂಕಗಳ ಬದಲಿ ಗ್ರೇಡ್‌ನ್ನು ನೀಡಲಾಗುತ್ತಿದ್ದು, ಸಿ+ ಗ್ರೇಡ್ ಅಂದರೆ (ಶೇ. 30 ರಿಂದ 49 ಅಂಕಗಳು) ಪಡೆದ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಅರ್ಹತೆಯನ್ನು ಪಡೆಯುತ್ತಾರೆ. ಆದ್ದರಿಂದ 8ನೇ ತರಗತಿಯಾದ ಮುಂದಿನ ತರಗತಿಯ ವಿದ್ಯಾರ್ಥಿಗಳು ಶೇ. 40 ರಷ್ಟು ಅಂಕಗಳನ್ನು ಅಥವಾ ಸಿ+ ಗ್ರೇಡ್ ಪಡೆದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆಂದು ಸರ್ಕಾರದ ಆದೇಶವನ್ನು ತಿದ್ದುಪಡಿ ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರಿದು ಸರ್ಕಾರದ ಆದೇಶದಲ್ಲಿ ಶ್ರವಣದೋಷವುಳ್ಳವರು ದೃಷ್ಟಿದೋಷವುಳ್ಳವರು ಹಾಗೂ ದೈಹಿಕ ಅಂಗವಿಕಲರು ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುತ್ತಾರೆಂದು ತಿಳಿಸಲಾಗಿದೆ. ಅಂಗವಿಕಲರ ಅಧಿನಿಯಮ 1995ರ ಪ್ರಕಾರ ಅಂಗವಿಕಲತೆ ಅಂದರೆ ಮೇಲೆ ತಿಳಿಸಿದ ಅಂಗವಿಕಲತೆಯ ಜೊತೆಗೆ ಬುದ್ಧಿಮಾಂಧ್ಯತೆ ಮಾನಸಿಕ ಅಸ್ವಸ್ಥತೆ ಮುಂತಾದವುಗಳು ಸಹ ಒಳಗೊಂಡಿರುತ್ತದೆ. ಆದ್ದರಿಂದ ಅಂಗವಿಕಲರ ಅಧಿನಿಯಮ ಅಡಿಯಲ್ಲಿ ಬರುವ ಬುದ್ಧಿಮಾಂಧ್ಯತೆಯನ್ನು ಸಹ ಅಂಗವಿಕಲತೆ ಎಂದು ಪರಿಗಣಿಸಿರುವುದರಿಂದ ಬುದ್ಧಿಮಾಂಧ್ಯರಿಗೂ ಸಹ ವಿದ್ಯಾರ್ಥಿ ವೇತನವನ್ನು ನೀಡಬೇಕಾಗಿರುತ್ತದೆ. ಆದ್ದರಿಂದ ಈ ಯೋಜನೆಯನ್ನು ಮೇಲ್ಕಾಣಿಸಿದ ಅಂಶಗಳಿಗೆ ಮಾರ್ಪಾಡು ಮಾಡಿ ಸರ್ಕಾರದ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ಕ್ರಮಸಂಖ್ಯೆ(4) ರಲ್ಲಿ ಓದಲಾದ ನಡವಳಿಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿತವಾದ ಅಧಿಕಾರಯುತ ಸಮಿತಿಯ ದಿನಾಂಕ: 22-05-2007ರ ಸಭೆಯಲ್ಲಿ ಪ್ರಸ್ತಾವನೆಯ ಕುರಿತು ಚರ್ಚಿಸಲಾಗಿದ್ದು, ಈಗಾಗಲೇ ಆರ್ಥಿಕ/ಯೋಜನಾ ಇಲಾಖೆ ನೀಡಿರುವ ಅಭಿಪ್ರಾಯದನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿದ್ದು ಈ ಕೆಳಗಿನ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಮಮಇ:12:ಪಿಹೆಚ್‌ಪಿ:2006:ಬೆಂಗಳೂರು. ದಿನಾಂಕ: 22-06-2007**

ಸರ್ಕಾರದ ಆದೇಶ ಸಂಖ್ಯೆ: SWL;123;PHP;78, ದಿನಾಂಕ: 02-06-1978ರ ರೀತ್ಯಾ ಹೊರಡಿಸಲಾಗಿರುವ ಅಂಗವಿಕಲರಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವ ಯೋಜನೆಯನ್ನು ಭಾಗಶಃ ಮಾರ್ಪಡಿಸಿ ಸದರಿ ಯೋಜನೆಯಡಿ ಅರ್ಹತೆ ಮಾನದಂಡದಲ್ಲಿ ಈ ಕೆಳಕಂಡ ಅಂಶಗಳನ್ನು ಸೇರ್ಪಡೆ ಮಾಡಲಾಗಿದೆ:

1. 1ನೇ ತರಗತಿಯಿಂದ 7ನೇ ತರಗತಿಯವರೆಗೆ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮುಂದಿನ ತರಗತಿಗೆ ಹೋದಲ್ಲಿ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು.
2. 8ನೇ ತರಗತಿಯಿಂದ ಮುಂದಿನ ತರಗತಿಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು ಕನಿಷ್ಠ ಶೇ. 40 ರಷ್ಟು ಅಂಕಗಳನ್ನು ಅಥವಾ ಸಿ+ ಗ್ರೇಡ್ ಪಡೆದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ.
3. ಅಂಗವಿಕಲರ ಅಧಿನಿಯಮದಡಿ ಬುದ್ಧಿಮಾಂಧ್ಯತೆಯನ್ನು ಸಹ ಅಂಗವಿಕಲತೆ ಎಂದು ಪರಿಗಣಿಸಿರುವುದರಿಂದ ಬುದ್ಧಿಮಾಂಧ್ಯರಿಗೂ ಸಹ ವಿದ್ಯಾರ್ಥಿವೇತನ ನೀಡಲು ಈ ಯೋಜನೆಯನ್ನು ವಿಸ್ತರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD:53;EXP-3; 2006, ದಿನಾಂಕ: 20-12-2006 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PD-11; IMM; 2007, ದಿನಾಂಕ: 08-03-2007 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಇವರಿಗೆ
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಆದೇಶದ 500 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.